ಇಂದು ದಿನಾಂಕಃ 19.09.2018 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

**ಪಾಟಿ ಸವಾಲುಃ** ಪ್ರತಿವಾದಿಯ ಪರ ಶ್ರೀ ಎಸ್.ಆರ್.ಎ ವಕೀಲರಿಂದಃ

1. ಈ ನ್ಯಾಯಾಲಯದಲ್ಲಿ ದಾವೆಯನ್ನು ನಮ್ಮ ಆಸ್ತಿಯನ್ನು ಬಿಡಿಸಿಕೊಳ್ಳಲು ಹಾಕಿದ್ದೇವೆ. ನನ್ನ ತಂದೆ ಅಡಿವೆಪ್ಪರವರಿಗೆ ಮೂರು ಜನ ಮಕ್ಕಳು. ನನ್ನ ತಂದೆಗೆ ಒಟ್ಟು 12 ಎಕರೆ ಆಸ್ತಿ ಹಾಗೂ 3 ಖಾಲಿ ಜಾಗಗಳು ಇದ್ದವು. ಸದರಿ ಆಸ್ತಿಗಳನ್ನು ನಾನು ಮತ್ತು ನನ್ನ ಸಹೋದರರು 25 ವರ್ಷಗಳ ಹಿಂದೆ ವಿಭಾಗ ಮಾಡಿಕೊಂಡು ಸ್ವಾಧೀನದಲ್ಲಿರುತ್ತೇವೆ. ಸದರಿ ವಿಭಾಗ ಮಾಡಿಕೊಂಡ ಕುರಿತು ಯಾವುದೇ ದಾಖಲಾತಿಗಳನ್ನು ಮಾಡಿಕೊಂಡಿರುವುದಿಲ್ಲ. ನಾನು ದಾವಾ ಆಸ್ತಿಯಲ್ಲಿ ಮನೆ ಕಟ್ಟಿಕೊಂಡು ವಾಸವಿದ್ದೇನೆ. ಆ ಕುರಿತು ನನ್ನ ವಕೀಲರಿಗೆ ಮಾಹಿತಿ ನೀಡಿ ಬರೆಸಿದ್ದೇನೆ. ನಾನು ದಾವಾ ಆಸ್ತಿಯಲ್ಲಿ ವಾಸವಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯ ನಂಬರ್ಃ 816 ಇರುತ್ತದೆ. ಸದರಿ ಆಸ್ತಿಯ ವಿಸ್ತೀರ್ಣ ನನಗೆ ಶಾಲೆ ಕಲೆತಿಲ್ಲದಿದ್ದರಿಂದ ಗೊತ್ತಿಲ್ಲ, ಆದರೆ ಸುಮಾರು ಒಟ್ಟು 12 ಗುಂಟೆ ಇರುತ್ತದೆ.

2. ನನ್ನ ವಕೀಲರಿಗೆ ದಾವಾ ಆಸ್ತಿಯ ವಿಸ್ತೀರ್ಣ ಹೇಳಿ ಬರೆಸಿರುತ್ತೇನೆ. ಸದರಿ ಆಸ್ತಿಯ ವಿಸ್ತೀರ್ಣವನ್ನು ಪಂಚಾಯತಿ ದಾಖಲಾತಿಗಳ ಆಧಾರದ ಮೇಲೆ ಬರೆಸಿರುತ್ತೇನೆ. ನಾನು ಹಾಜರುಪಡಿಸಿರುವ ಪಂಚಾಯತಿ ದಾಖಲಾತಿಗಳಲ್ಲಿ ವಿಸ್ತೀರ್ಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ದಾವಾ ಆಸ್ತಿಯಲ್ಲಿ ಮನೆ ಕಟ್ಟಿಕೊಂಡು ವಾಸವಿದ್ದಾರೆ ಎಂದರೆ ಸರಿಯಲ್ಲ. ಹಂಸಬಾವಿ ಗ್ರಾಮದಿಂದ ಕಾರಗಿ ಗ್ರಾಮಕ್ಕೆ ಬಂದಾಗ ಮೊದಲನೇ ಮನೆ ಮತ್ತು ಜಾಗ ಪ್ರತಿವಾದಿಗೆ ಸೇರಿದೆ ಎಂದರೆ ಸಾಕ್ಷಿಯು ಅದು ನಮಗೆ ಸೇರಿದ್ದು ಎಂದು ನುಡಿಯುತ್ತಾರೆ. ಪ್ರತಿವಾದಿಯ ಆಸ್ತಿಯು ನಮ್ಮ ಅಕ್ಕ-ಪಕ್ಕದಲ್ಲಿ ಇರುವುದಿಲ್ಲ.

3. ದಾವಾ ಆಸ್ತಿಯ ನಿಜವಾದ ಆಸ್ತಿ ನಂಬರ್ಃ 814/ಬಿ ಎಂದರೆ ಸರಿಯಲ್ಲ. ಸದರಿ ಆಸ್ತಿಯಲ್ಲಿ ಪ್ರತಿವಾದಿಯ ಪೂರ್ವಿಕರು ವಾಸವಿದ್ದು, ಪ್ರಸ್ತುತ ಪ್ರತಿವಾದಿಯ ಮಾಲೀಕತ್ವ ಮತ್ತು ಸ್ವಾಧೀನದಲ್ಲಿದೆ ಎಂದರೆ ಸರಿಯಲ್ಲ. ನಾನು ಅನಕ್ಷರಸ್ಥನಿರುತ್ತೇನೆ. ಆಸ್ತಿ ನಂಬರ್ಃ 814

ಮೂಲತಃ ಬಸಪ್ಪ ತಾಯಿ ಯಲ್ಲವ್ವ ಮಾದರರವರಿಗೆ ಸೇರಿದ್ದು ಎಂದರೆ ಸರಿಯಲ್ಲ. ಸದರಿಯವರ ಹೆಸರಿಗೆ ಸುಮಾರು 60-70 ವರ್ಷಗಳಿಂದ ಖಾತೆ ದಾಖಲಾಗಿತ್ತು ಎಂದರೆ ಸುಳ್ಳು. ಸದರಿ ಬಸಪ್ಪರವರ ಇಬ್ಬರು ಮಕ್ಕಳಾದ ಚೌಡಪ್ಪ ಮತ್ತು ಪಕ್ಕೀರಪ್ಪರವರಿಗೆ ಹಂಚಿಕೆಯಾಗಿ ಅವರ ಹೆಸರಿಗೆ ಖಾತೆ ದಾಖಲಾಗಿತ್ತು ಎಂದರೆ ಸರಿಯಲ್ಲ. ಆ ಕಾಲಕ್ಕೆ ಆಸ್ತಿ ನಂಬರ್ಃ 814/ಬಿ ಪ್ರತಿವಾದಿಯ ಗಂಡನ ಹೆಸರಿಗೆ ಬಂದಿತ್ತು ಎಂದರೆ ಸುಳ್ಳು. ಆ ಪ್ರಕಾರ ಪಂಚಾಯತಿ ದಾಖಲಾತಿಗಳಲ್ಲಿ ನಮೂದು ಇದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಮ್ಮ ಆಸ್ತಿಯೇ ಬೇರೆ ಅವರ ಆಸ್ತಿಯೇ ಬೇರೆ ಎಂದು ನುಡಿಯುತ್ತಾರೆ.

4. ಮೇಲ್ಕಂಡಂತೆ ಬಸಪ್ಪ ತಾಯಿ ಯಲ್ಲವ್ವ ಮಾದರವರಿಂದ ಬಂದ ಆಸ್ತಿಯನ್ನು ಪ್ರತಿವಾದಿಯು ಸ್ವಾಧೀನದಲ್ಲಿಟ್ಟುಕೊಂಡು ಇದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಯ ಆಸ್ತಿಯ ಚೆಕ್ಕುಬಂದಿ ಪೂರ್ವಕ್ಕೆ ಹಂಸಬಾವಿ-ಕಾರಗಿ ರಸ್ತೆ, ಪಶ್ಚಿಮಕ್ಕೆ ಮಲ್ಲೇಶಪ್ಪ ಗೋಣೆಪ್ಪ ಬೋಗಾವಿರವರ ಆಸ್ತಿ, ಉತ್ತರಕ್ಕೆ ಪಂಚಾಯತಿ ಓಣಿ, ದಕ್ಷಿಣಕ್ಕೆ ಶೇಖಪ್ಪ ಸಣ್ಣಹನುಮಂತಪ್ಪರವರ ಆಸ್ತಿ ಇದೆ ಎಂದರೆ ಸಾಕ್ಷಿಯು ಅದನ್ನು ಸುಳ್ಳು ರೀತಿಯಿಂದ ಸೃಷ್ಟಿಸಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ಈ ದಾವೆಯನ್ನು ಮಾಡುವ ಪೂರ್ವದಲ್ಲಿ ಪ್ರತಿವಾದಿ ನನಗೆ ಒಂದು ಕೇವಿಯಟ್ ನೋಟಿಸು ಕಳುಸಿದ್ದರು ಎಂದರೆ ಸರಿಯಲ್ಲ. ಸದರಿ ನೋಟಿಸನ್ನು ನಾನು ಪಡೆದಕೊಂಡಿದ್ದರೂ ಸಹ ಇಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಆಸ್ತಿಯಲ್ಲಿ ಪ್ರತಿವಾದಿ ಹಾಗೂ ಅವರ ಹಿರಿಯರು 45 ತೇಗದ ಗಿಡಗಳು, 3 ಬೇವಿನ ಗಿಡಗಳು ಹಾಗೂ ವಿವಿಧ ರೀತಿಯ ಮರಗಳು ಇವೆ ಎಂದರೆ ಸಾಕ್ಷಿಯು ಅವುಗಳನ್ನು ನಾನು ಬೆಳೆಸಿದ್ದೇನೆ ಎಂದು ನುಡಿಯುತ್ತಾರೆ. ತೇಗದ ಮರ ಹಾಗೂ ಬೇವಿನ ಮರ ಇರುವ ಕುರಿತು ನಾನು ನನ್ನ ವಕೀಲರಿಗೆ ಹೇಳಿರುತ್ತೇನೆ. ಸದರಿ ಯಾವುದೇ ಗಿಡಗಳನ್ನು ಹಚ್ಚದೇ ಇರುವ ಕಾರಣ ಆ ಸದರಿ ಸಂಗತಿಗಳನ್ನು ನನ್ನ ವಾದ ಪತ್ರದಲ್ಲಿ ನಮೂದಿಸಿಲ್ಲ ಎಂದರೆ ಸರಿಯಲ್ಲ.

5. ನಾನು ವಾಸವಿರುವ ಮನೆಗೆ ಪ್ರತಿವಾದಿ ಬಂದು ಎಂದೂ ತೊಂದರೆ ನೀಡಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಾನು ತೊಂದರೆ ನೀಡಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿಯು ಬಹಳ ಬಡ ವರ್ಗದವರಾಗಿದ್ದು, ಅವರಿಗೆ ತೊಂದರೆ ನೀಡುವ ಉದ್ದೇಶದಿಂದ ಈ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ ಹಾಗೂ ಅವರ ಕುಟುಂಬದವರು

ಕಾನೂನಿನ ಪರಿಪಾಲಕರು ಎಂದರೆ ಸರಿಯಲ್ಲ. ನನ್ನ ವಾದ ಪತ್ರದ ಸಂಗತಿಗಳಂತೆ ನಾನು ದಾವಾ ಆಸ್ತಿಯಲ್ಲಿ ಯಾವುದೇ ರೀತಿಯ ಬಣವೆ, ಸೊಪ್ಪು ಇತ್ಯಾದಿಗಳನ್ನು ಹಾಕಿಕೊಂಡು ಮತ್ತು ಮನೆ ಕಟ್ಟಿಕೊಂಡು ವಾಸವಿಲ್ಲ ಎಂದರೆ ಸರಿಯಲ್ಲ. ನಾನು ಆಧರಿಸುವ ದಾವಾ ಆಸ್ತಿಯ ನಂಬರ್ಃ 816 ಆಗಿರುವುದಿಲ್ಲ, ಅದು 814/ಬಿ ಆಗಿದ್ದು, ಪ್ರತಿವಾದಿಯ ಮಾಲ್ಕೀ ಮತ್ತು ಸ್ವಾಧೀನಾನುಭವದಲ್ಲಿದೆ ಎಂದರೆ ಸರಿಯಲ್ಲ. ಪ್ರತಿವಾದಿಗಳ ಆಸ್ತಿಯನ್ನು ಕಬಳಿಸಬೇಕೆಂಬ ಉದ್ದೇಶದಿಂದ ಈ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

ಸಹಿ/-

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಹಿರೇಕೆರೂರು.